ಮುಕ್ತವಾಗಿ ನಕ್ಕಳು ವೈಷ್ಣವಿ.

"ನಿಮಗೆ ಇಷ್ಟೊಂದು ಖುಷಿಯಾಗುತ್ತೆ ಅನ್ನೋದಾದ್ರೆ ಇನ್ನೊಂದು ಸಲ ನಿಮ್ಮ ತಂದೆಗೆ ನಮಸ್ಕಾರ ಮಾಡ್ತೀನಿ. ಅವರು ನನಗೂ ತಂದೆ ಇದ್ದ ಹಾಗೆ..."

"ಮಾಡೀಪ್ಪಾ, ವ್ಯಾಯಾಮ ಆಗುತ್ತೆ..." ಈಗ ವೈಷ್ಣವಿಯ ಕಣ್ಣು ಅವನ ಸೊಂಟದ ಸುತ್ತಳತೆಯ ಮೇಲೆ ನೆಟ್ಟಿತ್ತು. ಹೊಟ್ಟೆ ಒಂದಿಷ್ಟು ಮುಂದೆ ಬಂದಿದೆ ಎನ್ನುವುದು ಅವನಿಗೂ ಗೊತ್ತು. ದಿನಕ್ಕೆ ಎಂಟೊಂಬತ್ತು ಗಂಟೆ ಕೂತಲ್ಲೇ ಕೂತಿದ್ದರೆ ಮತ್ತೇನಾಗಲು ಸಾಧ್ಯ? ವೈಷ್ಣವಿಯ ಚೇಷ್ಟೆಮಾತಿಗೆ ಗಂಭೀರವಾಗಿ ಉತ್ತರಿಸಿದ ಫಲ್ಗುಣ,

"ನೋಡ್ತಿರಿ, ನಾಳೆಯಿಂದ ನನ್ನ ಟೈಂಟೇಬಲ್ಲೇ ಬದಲಾಗಿ ಬಿಡುತ್ತೆ. ದಿನಾ ಬೆಳಿಗ್ಗೆ ಐದಕ್ಕೆ ಎದ್ದು ಎರಡು ಗಂಟೆ ವಾಕಿಂಗು. ಆಮೇಲೆ ಯೋಗ. ಹೊತ್ತುಹೊತ್ತಿಗೆ ತಿಂಡಿ, ಊಟ. ಎಲ್ಲಾ ಲಿಮಿಟ್..."

"ನೀವೆಲ್ಲಾದ್ರೂ ಒಂದು ತಿಂಗಳು ಬಿಟ್ಟು ಮನೆಗೆ ಬಂದ್ರೆ ನಿಮ್ಮ ಗುರುತೇ ಸಿಗಲ್ಲ ಅನ್ನಿ..."

ತಮ್ಮನ್ನು ಗಮನಿಸದೆ ಅವರಿಬ್ಬರೇ ಮಾತಾಡಿಕೊಳ್ಳುತ್ತಿರುವುದು ರಾಯರಿಗೆ ಅಸಹನೆ.

"ವೈಷ್ಣವೀ, ತಗೋ. ಏನೋ ಉಡುಗೊರೆ ತಂದಿದಾನೆ ನಮ್ಮ ಹುಡುಗ..."

"ಹುಡುಗ!" ಕಚಕುಳಿ ಕೊಟ್ಟಂತೆ ಮತ್ತೆ ನಕ್ಕಳು ವೈಷ್ಣವಿ.

"ನನಗಿಂತಾ ಸಣ್ಣೋರು ನನ್ನ ಕಣ್ಣಿಗೆ ಹುಡುಗ್ರೇ..." ತಮ್ಮ ಮಾತನ್ನು ಸಮರ್ಥಿಸಿಕೊಂಡರು ರಾಯರು.

ಅವರ ಮಾತಿನಿಂದ ಫಲ್ಗುಣನಿಗೆ ಖುಷಿಯಾಗಿದ್ದು ಅವನ ಅರಳಿದ ಮುಖದಿಂದಲೇ ಗೊತ್ತು ಮಾಡಿಕೊಂಡಳು ವೈಷ್ಣವಿ.

"ಕೂತ್ಕೊಳ್ಳಪ್ಪಾ, ಯಾಕೆ ನಿಂತ್ಕೊಂಡೇ ಮಾತಾಡ್ತಿದ್ದಿ?"

ಫಲ್ಗುಣ ರಾಯರ ಎದುರಿನ ಸೋಫಾದಲ್ಲಿ ಮಂಡಿಸಿದ. ಅಪ್ಪನ ಕೈಲಿದ್ದ ಕವರ್ ತೆಗೆದುಕೊಂಡು ಅದರೊಳಗಿದ್ದ ಸ್ವೀಟ್‌ಬಾಕ್ಸುಗಳನ್ನು ನಡುಮಧ್ಯದ ಟೀಪಾಯಿಯ ಮೇಲಿಟ್ಟಳು ವೈಷ್ಣವಿ. ಅವಳು ನಾಜೂಕಾಗಿ ರಟ್ಟಿನ ಬಾಕ್ಸು ತೆಗೆಯುವುದನ್ನು ದೊಡ್ಡ ಘನಕಾರ್ಯ ಎನ್ನುವಂತೆ ನೋಡುತ್ತಾ ಕೂತಿರುವ ಫಲ್ಗುಣನ ನಡವಳಿಕೆ ವೈಷ್ಣವಿಯ ಗಮನಕ್ಕೆ ಬರದೆ ಇರಲಿಲ್ಲ. ನವಿಲುಗರಿಯನ್ನು ಕೆನ್ನೆಯ ಮೇಲಾಡಿಸಿದಂತೆ ಹಿತವಾದ ನವಿರು ಭಾವನೆ. ಮೈಯ ರಕ್ತ ಬಿಸಿಯೇರುತ್ತಿರುವುದು ಕದಪುಗಳಲ್ಲಿ ಪ್ರಕಟವಾದಂತೆ ಕೆನ್ನೆಗಳಲ್ಲಿ ಎಳೆಗೆಂಪು. ತಾಳ ತಪ್ಪಿ ಬಡಿದುಕೊಳ್ಳುತ್ತಿರುವ ಹೃದಯ. ಅವಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡವನಂತೆ ಫಲ್ಗುಣನ ತುಟಿಗಳೆಡೆಯಲ್ಲಿ ಕಂಡೂ ಕಾಣದ ನಸು ನಗು.

ಇನ್ನೂ ಬಿಸಿಬಿಸಿಯಾಗಿದ್ದ ಮೈಸೂರು ಪಾಕನ್ನು ಕಂಡು ವೈಷ್ಣವಿಗೆ ನಿಜಕ್ಕೂ ಸಂಭ್ರಮವಾಯ್ತು.

"ನನಗೆ ಸ್ಪೆಷಲ್ ಮೈಸೂರುಪಾಕು ಅಂದ್ರೆ ಇಷ್ಟ ಅಂತ ನಿಮಗೆ ಹೇಗೆ ಗೊತ್ತಾಯ್ತು?"

"ನೀವು ಬಾಯ್ಬಿಟ್ಟು ಹೇಳೋದೇ ಬೇಡ. ನಿಮಗೆ ಏನೇನು ಇಷ್ಟ ಅಂತ ನಂಗೆ ಗೊತ್ತಾಗ್ಬಿಟ್ಟಿದೆ..."

ಎದುರಲ್ಲಿ ವಯಸ್ಸಾದ ತನ್ನಪ್ಪ ಕೂತಿದ್ದಾರೆನ್ನುವುದನ್ನು ಕಣ್ಸನ್ನೆಯಿಂದಲೇ ಅವನಿಗೆ ಮನದಟ್ಟು ಮಾಡಿಕೊಟ್ಟಳು ವೈಷ್ಣವಿ. ತುದಿನಾಲಿಗೆಯನ್ನು ಹಲ್ಲುಗಳಿಂದ ಕಚ್ಚಿಕೊಂಡು ಅವಳ ಸನ್ನೆಯನ್ನು ಗ್ರಹಿಸಿದೆನೆಂಬುದನ್ನು ತೋರಿಸಿಕೊಂಡ ಫಲ್ಗುಣ. ಇಂತಾ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳುವಷ್ಟು ರಾಯರು ಪ್ರಜ್ಞಾವಂತರಲ್ಲ ಅನ್ನುವುದಕ್ಕಿಂತಲೂ ಹೀಗೆ ನಡೆಯಬಹುದು